ಇವತ್ತು ಸರ್ಕಾರಕ್ಕೆ ಸಾಲ ಇದ್ದ ಕಾರಣ ಅದರಲ್ಲಿ ಅವರ ಭೂದಾಖಲೆಯಲ್ಲಿ ಅದನ್ನು ನಮೂದಿಸಲಾಗಿದೆ. ಆದ್ದರಿಂದ ಅವರಿಗೆ ಮುಂದೆ ಯಾವುದೇ ಸವಲತ್ತುಗಳನ್ನುಪಡೆಯುವುದಕ್ಕೆ ಅಸಾಧ್ಯವಾಗಿದೆ. ಈ ಎರಡೂವರೆ ಸಾವಿರ ರೂಪಾಯಿಗಳನ್ನು ಎಲ್ಲಿ ಕಟ್ಟಬೇಕು, ಯಾರು ವಸೂಲು ಮಾಡಬೇಕು ಎನ್ನುವುದರ ಬಗ್ಗೆ ಇನ್ನೂ ಗೊಂದಲವಿದೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇದನ್ನು ಯಾರು ವಸೂಲು ಮಾಡಬೇಕು ಮತ್ತು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಸರ್ಕಾರವನ್ನು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ನಾಣಯ್ಯ:- ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು:- ಮಾನ್ಯ ಸಭಾಧ್ಯಕ್ಷರೇ, ಅವರು ಸಾಲ ತೆಗೆದುಕೊಂಡಿದ್ದಾರೆ ಮತ್ತು ಸಾಲ ತೆಗೆದುಕೊಂಡಿರುವವರು ಸಾಲವನ್ನು ಕೊಡಲಿಕ್ಕೆ ತಯಾರಾಗಿದ್ದಾರೆ, ಮುಂದೆ ಬರುತ್ತಾರೆ. ಆದರೆ ಯಾರು ಸಾಲವನ್ನು ವಸೂಲಾತಿ ಮಾಡಬೇಕು ಎನ್ನುವಂಥಾದ್ದಕ್ಕೆ ಎಲ್ಲಿಯೂ ನಿಯಮಗಳು ಇಲ್ಲ. ಇದರ ಪರಿಣಾಮ ಏನಾಗುತ್ತದೆ ಎಂದರೆ, ಅವರ ದಾಖಲೆಗಳಲ್ಲಿ ಈ ಸಾಲ ತೆಗೆದುಕೊಂಡಿರುವುದು ನಮೂದಾಗಿರುತ್ತದೆ. ಬೇರೆ ಸಾಲ ಪಡೆಯುವುದಕ್ಕೆ ಅವರಿಗೆ ಕಷ್ಟವಾಗುತ್ತದೆ ಎನ್ನುವುದರಿಂದ ಬಹುಶ: ಇದು ತಾಲ್ಲೂಕು ಪಂಚಾಯತ್ ಅಥವಾ ಜಿಲ್ಲಾಪಂಚಾಯತ್ ಯಾರ ಮುಖಾಂತರ ಈ ಕೆಲಸವನ್ನು ಮಾಡಿಸಬೇಕು, ಎಂದು ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಈ ಹುಡ್ಕೋ ಸಾಲವನ್ನು ಹಿಂದಿರುಗಿಸಲು ಮುಂದೆ ಬರತಕ್ಕಂಥವರಿಗೆ ಎಲ್ಲಿಗೆ ಹಣವನ್ನು ಕಟ್ಟಬೇಕು ಎನ್ನುವುದಕ್ಕೆ ನಿಯಮ ಇಲ್ಲದೇಹೋದರೆ, ಸರ್ಕಾರದ ಆಜ್ಞೆ ಇದ್ದರೆ, ಯಾವರೀತಿ ಅದು ಒಂದುವೇಳೆ ರವಾನಿಸದೇ ಹೋಗಿದ್ದರೆ, ಅದನ್ನು ರವಾನಿಸಲಿಕ್ಕೆ ಇರತಕ್ಕಂಥ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಇ) ಮಾಜಿ ಪಟೇಲರಿಗೆ ಹಾಗೂ ಶಾನುಭೋಗರಿಗೆ ನಿವೃತ್ತಿ ವೇತನ

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಪಟೇಲರು ಶ್ಯಾನುಭೋಗರು ಏನು ಕೆಲಸವನ್ನು ಮಾಡುತ್ತಿದ್ದರು, ಅವರನ್ನು ಈಗ 1962ರಿಂದ ತೆಗೆದುಹಾಕಿದ್ದಾರೆ. ಶ್ಯಾನುಭೋಗರು ಕೆಲವರನ್ನು ವಿಲೇಜ್ ಅಕೌಂಟೆಂಟ್ ಎಂದು ಪರಿವರ್ತನೆ ಮಾಡಿ ಅವರ ಸೇವೆಯನ್ನು ಮುಂದುವರೆಸಿದೀರಿ. ಅದೇರೀತಿಯಲ್ಲಿ ಬಂದಿರತಕ್ಕಂಥ ತೋಟಿ-ತಳವಾರರನ್ನು ಈ ರಾಜ್ಯದಲ್ಲಿ ಹೊರಗೆ ಬಿಡದೇನೆ ಅವರಿಗೂ ಒಂದು ಜೀವನಕ್ಕೆ ಅವಕಾಶವನ್ನು ಕಲ್ಪಿಸಕೊಟ್ಟಿರಿ. ಆದರೆ ಪಟೇಲರುಗಳ ಪರಿಸ್ಥಿತಿ ಮಾತ್ರ ಬಹಳ ಚಿಂತಾಜನಕವಾಗಿದೆ. ಇವರನ್ನು ಹೇಳುವವರು ಕೇಳುವವರು ಇಲ್ಲ ಎನ್ನುವಂಥ ಪರಿಸ್ಥಿತಿ ಇದೆ. ನೀವು ಅವರಿಗೆ ನಿವೃತ್ತಿವೇತನವನ್ನು ಕೊಡಬೇಕು, ಅವರಿಗೆ ಕೆಲವು ಸೌಲಭ್ಯಗಳನ್ನು ಮಾಡಿಕೊಡಬೇಕು ಅಂತಹೇಳಿ ಮಾಡಿದರೂ ಕೂಡ.....

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:- ಏಕೆಂದರೆ, ಪಟೇಲರುಗಳ ಪರಿಸ್ಥಿತಿಯನ್ನು ಪಟೇಲರ ರಾಜ್ಯದಲ್ಲೇ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇನ್ನಾದರೂ ಕೂಡ ಗಮನಹರಿಸುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಇವರಿಗೆ ಈ ಸೇವಾಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಕಾನೂನು ಏನು ಜಾರಿಗೆ ತಂದಿದ್ದೀರಿ, ಅದನ್ನು ಸುಸೂತ್ರವಾಗಿ ಅಧಿಕಾರಿಗಳು ಜಾರಿಕೊಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಇದೊಂದು ಅತ್ಯಂತ ದುರ್ದೈವದ ಸಂಗತಿ. ಇವತ್ತೂ ಕೂಡ ಬಹಳಷ್ಟು ಜನ ಪಟೇಲರುಗಳು ಜಿಲ್ಲಾಧಿಕಾರಿಗಳ ಕಚೇರಿ, ತಹಸೀಲ್ದಾರ್‌ರ ಕಚೇರಿಯನ್ನು ಕಾಯುತ್ತಿದ್ದಾರೆ.

ಸುಮಾರು 27 ಸಾವಿರ ಜನ ಪಟೇಲರುಗಳಲ್ಲಿ ಬಹಳಷ್ಟು ಜನ ಸತ್ತು ಕೆಟ್ಟುಹೋಗಿದ್ದಾರೆ. ಇನ್ನು ಸುಮಾರು ಹತ್ತು ಸಾವಿರ ಜನ ಇರಬಹುದು. ಅವರಿಗೆ 70-80 ವರ್ಷ ವಯೋಮಿತಿ ಮೀರುತ್ತಾ ಬಂದಿದೆ. ಅವರು ಇನ್ನಾದರೂ ಕೂಡ ಸರ್ಕಾರದಿಂದ ಏನಾದರೂ ಸೌಲಭ್ಯ ಸಿಗಲಿ ಎಂದುಹೇಳಿ ಅಲೆಯುತ್ತಿದ್ದಾರೆ. ಅವರಿಗೆ ಜನನ-ಮರಣ ದಾಖಲಾತಿ, ಕಂದಾಯ ವಸೂಲಿ ಇದರಲ್ಲಿ ಎಲ್ಲಾ ಅವರು ಸರ್ಕಾರಕ್ಕೆ ಅನೇಕವರ್ಷಗಳಿಂದ ಸಹಾಯ ಮಾಡುತ್ತಾ ಬಂದಂಥವರು. ಇವರಿಗೆ ಏನಾದರೂ ಕೊಡಬೇಕು ಎಂದುಹೇಳಿ ನೀವೇನು ಕಾನೂನ್ನು ತೆಗೆದುಕೊಂಡು ಬಂದಿದ್ದೀರಿ, ಅದು ಜಾರಿಯಾಗುತ್ತಿಲ್ಲ. ಅವರೆಲ್ಲ ಹೈಕೋರ್ಟಿಗೆ ಹೋಗಿದ್ದಾರೆ. ನೋಡಿ.....

ಅಧ್ಯಕ್ಷರು:- ನಿಮ್ಮ ಹತ್ತಿರ ಪೂರ್ಣ ಮಾಹಿತಿ ಇಲ್ಲ. ಈಗ ಏನಾಗಿದೆ ಎಂದರೆ, ಅವರಿಗೆ ನೀವು ಕೆಲವು ಬೆನಿಫಿಟ್ಸ್‌ನ್ನು ಅನೌನ್ಸ್ ಮಾಡಿರತಕ್ಕಂಥಾದ್ದು ಸೇರಿಲ್ಲ. ಅದಕ್ಕೆ ನಿಮ್ಮ ಯಾರ್ಡ್‌ಸ್ಟಿಕ್‌ನಲ್ಲಿ 1961-62ರಲ್ಲಿ ಅವರು ಡ್ಯೂಟಿ ಮಾಡಿರಬೇಕು ಎಂದುಹೇಳಿದೆ. ನಿಮ್ಮ ರೆಕಾರ್ಡ್ಸ್‌ನಲ್ಲೇ ಒಂದುವರ್ಷ ಬಿಟ್ಟುಹೋಗಿದೆ. ಆಕ್ಚುಯಲಿ, ಆ ವರ್ಷ ಎಲ್ಲರೂ ಕೆಲಸ ಮಾಡಿದ್ದಾರೆ. ಆ ಫೋಟ್‌ಗಿ ಕೊಡುವುದನ್ನು, ಆ ವರ್ಷ ಯಾರಿಗೂ ಫೋಟ್‌ಗಿಯನ್ನು ಕೊಟ್ಟಿಲ್ಲ. ಫೋಟಗಿಯನ್ನು ಕೊಟ್ಟಿರುವುದಕ್ಕೆ ಪ್ರೂಫ್ ತನ್ನಿ ಎಂದು ಹೇಳುತ್ತಾರೆ. ಅವರು ಉಳಿದಿರುವವರು ಎಲ್ಲಾ ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಹೈಕೋರ್ಟಿಗೆ ಹೋಗಿ. ಪಾಪ, ಅಲ್ಲಿಂದ ಡೈರೆಕ್ಷನ್ಸ್ ತಂದಿದ್ದಾರೆ. With all that, the Revenue Department somehow they have not taken that matter serioulsy. Please take a Compassionate view both about the patels and other village officers.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಮಂತ್ರಿಗಳೇ ಒಂದು ಪ್ರಕರಣದಲ್ಲಿ ಮೂರು ತಿಂಗಳೊಳಗಾಗಿ ಇವರದ್ದು ಸೆಟಲ್ ಮಾಡಬೇಕು ಎಂದುಹೇಳಿ- ಸೊರಬದ ಚಂದ್ರಪ್ಪಗೌಡ ಅವರ ಪ್ರಕರಣದಲ್ಲಿ ಆದೇಶ ಕೊಟ್ಟರೂ ಕೂಡ ಇದುವರೆಗೂ ಏನೇನೂ ಕೊಡದೇನೇ ಅವರು ಹಿಂದೆಮುಂದೆ ಅಲೆಸುತ್ತಾ ಇದ್ದರೆ. ಫೋಟಗಿಯ ರಿಜಿಸ್ಟರ್‌ನ ಒಂದು ಎಕ್ಸಟ್ರಾಟ್‌ನ್ನು ಕೂಡ ನಾನು ತಂದಿದ್ದೇನೆ. ಮಾನ್ಯ ಅಧ್ಯಕ್ಷರು ಹೇಳಿದಹಾಗೆ ಒಂದು ವರ್ಷದ್ದು ಬಿಟ್ಟುಹೋಗಿದೆ. ಹಿಂದಿನದ್ದು ಇದೆ ಮತ್ತು ಮುಂದಿನದ್ದೂ ಇದೆ.....

ಅಧ್ಯಕ್ಷರು:- ಬಿಟ್ಟುಹೋಗಿಲ್ಲ. ಆ ವರ್ಷ ಸರ್ಕಾಕ ಯಾರಿಗೂ ಫೋಟಗಿಯನ್ನೇ ಕೊಟ್ಟಿಲ್ಲ. ಇವರು ಫೋಟ್‌ಗಿಯನ್ನೇ ಕೊಡದೆ ಆ ವರ್ಷ ಫೋಟ್‌ಗಿಯನ್ನು ತೆಗೆದುಕೊಂಡಿದ್ದಕ್ಕೆ ಪ್ರೂಫ್ ತೆಗೆದುಕೊಂಡುಬನ್ನಿ ಎಂದು ಹೇಳುತ್ತಿದ್ದಾರೆ. ನಿಮಗೆ ಆ ನಿಯೋಗದವರು ಹೇಳಿದರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ, ಈಗ ಪಟೇಲರುಗಳಿಗೆ ಕೊಡುತ್ತಾ ಇರತಕ್ಕಂಥ ಈ ಮಾಸಾಶನ ಯಾವುದು ಉಂಟು ಅದನ್ನು ಕೊಡುತ್ತಿದ್ದಾರೆ. ಆದರೆ ಸರ್ಕಾರದ ಕೆಲವು ನಿಯಮಗಳ ಆಡಿಯಲ್ಲಿ ಯಾವುದೋ ಒಂದು ಕಟ್‌ಆಫ್ ಡೇಟ್‌ಗೆ ಸಂಬಂಧಪಟ್ಟ ಹಾಗೆ ಅಲ್ಲಿ ಕೆಲಸ ಮಾಡತಕ್ಕಂಥವರು ಅದಕ್ಕೆ ಸಂಬಂಧಪಟ್ಟಹಾಗೆ ಇದು ಹಿಂದೆ ನೂರು ರೂಪಾಯಿ ಎಂದು ಮಾಡಿದ್ದರು. ಈಗ ಅದನ್ನು ಕಾಲದಿಂದ ಕಾಲಕ್ಕೆ ಜಾಸ್ತಿಮಾಡುತ್ತಾ ಬಂದು ಈಗ 200-250ರೂಪಾಯಿ ಏನೋ ಕೊಡುತ್ತಿದ್ದರೆ. ಕೆಲವು ಪಟೇಲರುಗಳಿಗೆ ಆ ನಿಯಮಾನುಸಾರ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಅವರಿಗೆ ಕೊಡುತ್ತಿಲ್ಲ. ತಾವು ಹೇಳುತ್ತಿದ್ದೀರಿ. ಈಗ ಕೆಲವು ಪಟೇಲರುಗಳು ಹೈಕೋರ್ಟಿಗೆ ಸೋಗಿದ್ದಾರೆ, ಆದೇಶ ಬಂದಿದೆ ಎಂದು ತಮ್ಮಲ್ಲಿ ಅಂಥ ಯಾವುದಾದರೂ ಒಂದು ಆದೇಶದ ಪ್ರತಿ ಇದ್ದರೆ ಕಳುಹಿಸಿಕೊಟ್ಟುಬಿಡಿ.

ಅಧ್ಯಕ್ಷರು:- ಅಲ್ಲ; ನಾನೇ ಈ ಮೊದಲು ಹೈಕೋರ್ಟಿನ ಆದೇಶಗಳನ್ನೆಲ್ಲ ಒಳಗೊಂಡಂಥ ಒಂದು ದೀರ್ಘವಾದಂಥ ಪತ್ರವನ್ನೇ ಬರೆದಿದ್ದೇನೆ. ನಿಮ್ಮ ರೆವಿನ್ಯೂ ಇಲಾಖೆಯ ಜೊತೆಗೆ ನಾನೇ ವ್ಯವಹಾರ ಮಾಡಿದ್ದೇನೆ. ಅವರಿಗೆ ಎಲ್ಲಾ ವಯಸ್ಸಾಗಿ ಬಿಟ್ಟಿದೆ.

SRI M.C. NANAIAH:- Sri, I give this assurance. One copy of the Judgment I myself will take and make a reference to the Revenue Department and see that all such cases are settled.

M.R. SPEAKER:- Thank you very much.

(ಈ) ಕೊಯಮತ್ತೂರಿನಲ್ಲಿ ನಡೆದು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಆರೋಪಿಗಳ ಬಂಧನ,

+ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಸನ್ಮಾನ್ಯ ಅಧ್ಯಕ್ಷರೇ, ನಡೆದಂಥ ಬಾಂಬ್ ಸ್ಫೋಟದಲ್ಲಿ ಸುಮಾರು 60ಕ್ಕಿಂತಲೂ ಹೆಚ್ಚು ಜನರು ಮೃತಪಟ್ಟಂಥಾದ್ದು ಈ ದೇಶದ ಒಂದು ದೊಡ್ಡ ದುರ್ಘಟನೆ. ಇದಕ್ಕೆ ಸಂಬಂಧಪಟ್ಟಹಾಗೆ, ಈ ಬಾಂಬ್ ಎಲ್ಲಿ ತಯಾರಾಗಿತ್ತು ಎನ್ನುವುದರ ಬಗ್ಗೆ ತಮಿಳುನಾಡಿನ ಪೋಲೀಸರಿಂದ ಒಂದು ಸಂಶೋಧನೆಯ ಕೆಲಸ ಪ್ರಾರಂಭವಾಯಿತು. ಈ ದಿಸೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಈ ಎರಡು ನಗರಗಳಲ್ಲಿ ಈ ಬಾಂಬ್‌ನ್ನು ತಯಾರು ಮಾಡಿದಂಥ 5 ಸ್ಥಳಗಳಮೇಲೆ ಪೋಲೀಸರು ತಮಿಳುನಾಡಿನಿಂದ ಬಂದು ರೈಡ್ ಮಾಡಿದರು. ಅದರಲ್ಲಿ ಮೂರು ಜನಗಳನ್ನು ಬಂಧಿಸಿ, ಅದಕ್ಕೆ ಸಂಬಂಧಪಟ್ಟ ವಿಚಾರಣೆಯನ್ನು ಮಾಡಿದ ನಂತರದಲ್ಲಿ, ಬಹಳ ನೋವಿನ ಸಂಗತಿ ಎಂದರೆ, ಪ್ರಮುಖವಾದ ಆರೋಪಿಯಾದಂಥ ನ್ಯಾಚುರಲ್ ಎಕ್ಸ್‌ಪ್ಲೋಸಿವ್ ಕಾರ್ಪೊರೇಷನ್ನಿನ ಮಾಲೀಕರಾದಂಥ, ಮೈಸೂರು ನಗರದ ಕಾಂಗೆಸ್(ಐ)ನ ಜಂಟಿ ಕಾರ್ಯದರ್ಶಿಯೂ ಕೂಡ ಆದಂಥ ರಿಯಾಜುರ್ ರೆಹಮಾನ್ ಎನ್ನುವವರನ್ನು ಇವತ್ತಿನವರೆಗೂ ಬಂಧಿಸುವಂಥ ಯಾವುದೇ ಒಂದು ಪ್ರಯತ್ನವನ್ನು ಮಾಡಿಲ್ಲ. ಇವತ್ತು ಪೋಲೀಸಿನವರ ದಾಖಲೆ ಪ್ರಕಾರ, ಆತ ತಪ್ಪಿಸಿಕೊಂಡು ಹೋಗಿದ್ದಾನೆ ಎಂದು ಹೇಳಿದ್ದಾರೆ. ಆದರೆ, ಮೈಸೂರು ನಗರದಲ್ಲೇ ಇದ್ದರೂ ಕೂಡ, ಇವತ್ತಿನವರೆಗೆ ವಿಚಾರಣೆಯನ್ನು ಮಾಡಿಲ್ಲ. ಇನ್ನೊಂದು ವರದಿಯ ಪ್ರಕಾರ, ಈಗ ಬಂದಂಥ ಕುಟ್ಟಿ ಎಂಬುವರನ್ನು ವಿಚಾರಣೆ ಮಾಡಿದ ವಿಚಾರ ಪತ್ರಿಕೆಗಳಲ್ಲೂ ಬಂದಿದೆ. ಮೈಸೂರಿನಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು 2ನೇ ತಾರೀಖು ಬರುವಂಥ ಒಂದು ಸಂದರ್ಭ ಇತ್ತು. ಅವತ್ತಿನ ದಿವಸ ಮೈಸೂರಿನಲ್ಲಿ ಈ ಸ್ಫೋಟವನ್ನು ಮಾಡುವುದಕ್ಕೋಸ್ಕರ, ಮೈಸೂರಿನಲ್ಲಿ ಬಾಂಬನ್ನು ತಯಾರು ಮಾಡಲಾಗಿತ್ತುಎನ್ನುವಂಥ ವಿಚಾರವೂ ಕೂಡ ಪತ್ರಿಕೆಗಳಲ್ಲಿ ವಿಚಾರಣೆ ವಿಚಾರದಲ್ಲಿ ಬಂದಿದೆ. ಇದರಲ್ಲಿ ಪ್ರಮುಖ ಆರೋಪಿ ಯಾರು ಯಾರಿದ್ದಾರೆ, ದಸ್ತಗೀರ್ ಮತ್ತು ಅವ್ವರ್ ಎನ್ನುವವರೂ ತಪ್ಪಿಸಿಕೊಂಡಿದ್ದಾರೆ ಎಂಬ ದಾಖಲೆಯನ್ನು ತೋರಿಸುತ್ತಿದ್ದಾರೆ. ಇವತ್ತಿನವರೆಗೂ ಅಂತಹವರವನ್ನು ಬಂಧಿಸುವಂಥ ಪ್ರಯತ್ನ ಮಾಡಿಲ್ಲ. ಇನ್ನೊಂದು ಬಹಳ ನೋವಿನ ವಿಚಾರವೆಂದರೆ, ಮೈಸೂರಿನ ಹತ್ತಿರದಲ್ಲೇ ಇರುವಂಥ ಅಂಚ್ಯಾ ಗ್ರಾಮದಲ್ಲಿ ಒಂದು ಗೋಡೌನಿನ ಮೇಲೆ ಪೋಲೀಸರು ರೈಡ್ ಮಾಡಿದರು. ಅನಂತರ ಎರಡು ದಿವಸ ಆ ಗೋಡೌನ್‌ನ್ನು ಸೀಜ್ ಮಾಡಲಾಗಿತ್ತು. ಆದರೆ, 3ನೇ ದಿವಸದಿಂದ ಆ ಗೋಡೌನ್ ಕಾರ್ಯವನ್ನು ನಿರ್ವಹಿಸುತ್ತಿದೆ. ಆದರೆ, ಆ ಗೋಡೌನ್‌ನಲ್ಲಿ ಸೀಜ್ ಮಾಡಿದಂಥ ಸಂದರ್ಭದಲ್ಲಿ ಯಾವ ಯಾವ ಸ್ಫೋಟಕಗಳು ಸಿಕ್ಕಿತು ಎನ್ನುವುದರ ಬಗ್ಗೆಯಾಗಲೀ ಅಥವಾ ಆ ಮಾಲೀಕರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದಾಗಲೀ ಇಲ್ಲ. ಇನ್ನೊಂದು ಪ್ರಮುಖವಾದ ಕೊನೆಯ ವಿಚಾರ, ಈ ಐದು ಜನ ಯಾರು ಲೈಸೆನ್ಸ್‌ದಾರರು ಇದ್ದಾರೆ, ಅಂತಹವರಿಗೆ ಸರ್ಕಾರದ